# ವೃತ್ತಿಪರ ಮತ್ತು ಕೌಶಲ್ಯಾಧಾರಿತ ಶಿಕ್ಷಣ: ಅಭಿಪ್ರಾಯ ಮತ್ತು ಪರಿಕಲ್ಪನೆ



ಪ್ರೊ. ವಿಜೇಂದ್ರ ದೇವಾಡಿಗ ಉಡುಪಿ
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಕೃಪಾನಿಧಿ ಪದವಿ ಕಾಲೇಜು ಬೆಂಗಳೂರು.

ವಿದ್ಯೆ ಉಳ್ಳವನ ಮುಖವು ಮುದ್ದುಬರುವಂತಿಕ್ಕು
ವಿದ್ಯೆ ಇಲ್ಲದವನ ಹಾಳು ಮುಖವು
ಹಾಳೂರ ಹದ್ದಿನಂತಿಕ್ಕು ಸರ್ವಜ್ಞ

ವಿದ್ಯೆಯ ಅನಿವಾರ್ಯತೆ ಮತ್ತು ಅದರ ಪ್ರಾಮುಖ್ಯತೆಯನ್ನು ಬಹಳ ಮಾರ್ಮಿಕವಾಗಿ ಮತ್ತು ವಿಡಂಬನಾತ್ಮಕವಾಗಿ ತಿಳಿಸಿರುವ ವಚನವಿದು. ಇಲ್ಲಿ ವಿದ್ಯೆ ಎಂದರೆ ಶಿಕ್ಷಣಕ್ಕೆ ಸಂವಾದಿಯಾಗಿ ಬಳಕೆಯಾಗಿರುವ ಪದವಾಗಿದೆ. 'ಮುಖದ ಮುದ್ದು' ಎಂದರೆ ವ್ಯಕ್ತಿಯೊಬ್ಬನ ಸರ್ವತೋಮುಖ ಅಭಿವೃದ್ಧಿಯ ಸೂಚಕವೆಂದು ಎಂದು ಚಿಂತಿಸಬಹುದು. ಅಂದರೆ ಶಿಕ್ಷಣದ ಪ್ರಾಮುಖ್ಯತೆಯನ್ನು ನಮ್ಮ ನಾಡಿನ ದಾರ್ಶನಿಕರು ಬಹಳ ಹಿಂದೆಯೇ ಎತ್ತಿ ಹಿಡಿದಿದ್ದಾರೆ. ಶಿಕ್ಷಣವೆಂದರೆ ಕೇವಲ ಅಂಕಗಳಿಗಷ್ಟೆ ಮೀಸಲಾಗಿರದೆ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರಬೇಕು. ಶಿಕ್ಷಣವು ಕೇವಲ ಮಾರುಕಟ್ಟೆಯ ಸರಕಾಗದೆ ಒಂದು ಜವಾಬ್ದಾರಿಯುತ ಕೊಡುಗೆಯಾಗಬೇಕು. ವ್ಯಕ್ತಿಯೊಬ್ಬ ಪಡೆದ ಶಿಕ್ಷಣ ಸಾಕಾರವಾಗಬೇಕಾದರೆ ಅದು ಅವನ ವೃತ್ತಿಪರತೆಯನ್ನು, ಕೌಶಲ್ಯವನ್ನು ವೃದ್ಧಿಸುವಂತಿರಬೇಕು. ಅಂತಹ ಶಿಕ್ಷಣದ ಅನಿವಾರ್ಯತೆ ಹಿಂದೆಂದಿಗಿಂತಲೂ ಇಂದು ಅವಶ್ಯವಾಗಿದೆ. ಏಕೆಂದರೆ ಹಿಂದೆ ಅನಾಯಾಸವಾಗಿ ಸಿಗುತ್ತಿದ್ದ ಅದೆಷ್ಟೋ ವಿಚಾರಗಳು ಕಲಿಕೆಗಳು ಇಂದು ಮಕ್ಕಳಿಗೆ ಲಭ್ಯವಿಲ್ಲ. ಅವೆಲ್ಲವೂ ಶಿಕ್ಷಣದ ಮೂಲಕವೇ ದೊರಕಬೇಕಷ್ಟೆ.

ಅದು ಮೌಲ್ಯಶಿಕ್ಷಣವಿರಬಹುದು, ಅಜ್ಜಿ ಹೇಳುವ ಸುಂದರ ಕಾಲ್ಪನಿಕ ಕಥೆಗಳಿರಬಹುದು, ಸ್ವಂತ ಕೆಲಸಗಳನ್ನು ತಾವೇ ನಿಭಾಯಿಸುವುದಿರಬಹುದು, ಕೂಡು ಕುಟುಂಬದೊAದಿಗಿನ ಬದುಕಿರಬಹುದು, ಅಥವಾ ಓರಗೆಯವರೊಂದಿಗೆ ಕಲೆತು ಆಡುವುದಿರಬಹುದು. ಇವೆಲ್ಲ ಇಂದು ಶಿಕ್ಷಣದ ಮೂಲಕವೆ ವಿದ್ಯಾರ್ಥಿಗಳಿಗೆ ಕೊಡಬೇಕಷ್ಟೆ. ಆದ್ದರಿಂದ ಇಂದು ಶಿಕ್ಷಣ ವ್ಯವಸ್ಥೆಯು ಹಿಂದೆAದಿಗಿAತಲೂ ಹೆಚ್ಚು ಜವಾಬ್ದಾರಿಯುತವಾಗಿ ನಡೆಯಬೇಕಾಗಿದೆ. ಆದ್ದರಿಂದಲೇ ಏನೋ ಬದಲಾದ ಸನ್ನಿವೇಶದಲ್ಲಿ ಈಗ ಹೊಸ ಶಿಕ್ಷಣ ಪದ್ಧತಿ ಬಂದಿರಬಹುದಷ್ಟೆ.

ಯಾವುದೇ ನವ ಶಿಕ್ಷಣ ಪದ್ಧತಿ ಜಾರಿಗೆ ಬಂದಾಕ್ಷಣ ಶಿಕ್ಷಣದಲ್ಲಿ ಬದಲಾವಣೆ ಸಾಧ್ಯವಿಲ್ಲ. ಅದರ ಅನುಷ್ಠಾನ ಮತ್ತು ಸದಾ ಒರೆಗೆ ಹಚ್ಚುವ ಚಟುವಟಿಕೆಗಳಿಂದ ಪೂರಕವಾದ ಕೊಡು-ಕೊಳ್ಳುವಿಕೆಯಿಂದ ಶಿಕ್ಷಣವು ಇನ್ನಷು ವೃತ್ತಿಪರವಾಗುತ್ತದೆ. ಶಿಕ್ಷಣ ಯಾವತ್ತೂ ನಿಂತ ನೀರಲ್ಲ. ಸದಾ ಬದಲಾವಣೆಯ ಮೂಲಕ ಆಯಾ ಕಾಲಘಟ್ಟಕ್ಕೆ ಸರಿಹೊಂದುವ ಪದ್ಧತಿಗಳು ಜಾರಿಯಾಗುತ್ತಿವೆ. ಇಲ್ಲಿ ವೃತ್ತಿಪರತೆ ಎಂದರೆ ಶಿಕ್ಷಣದಿಂದ ಉದ್ಯೋಗ ಎಂಬ ಅರ್ಥದಲ್ಲಿ ನಾನು ಬಳಸುತ್ತಿಲ್ಲ. ಇಲ್ಲಿ 'ಶಿಕ್ಷಣ' ಎಂದರೆ 'ಜೀವನ' ಎಂಬ ವಿಶಾಲವಾದ ಅರ್ಥದ ಪರಿಕಲ್ಪನೆ ನನ್ನದು. ಏಕೆಂದರೆ ಜೀವನದಿಂದ ಹೊರತಾದದ್ದು ಯಾವುದನ್ನು ಮನುಷ್ಯ ತುಂಬಾ ಗಂಭೀರವಾಗಿ ಪರಿಗಣಿಸಿದ್ದಿಲ್ಲ. ಆದ್ದರಿಂದಲೇ ಶಿಕ್ಷಣವು ಜೀವನಕ್ಕೆ ಪೂರಕವಾಗಿಯೆ ಬಳಕೆಯಾಗಬೇಕು. ಕೌಶಲ್ಯಾಧಾರಿತ ಶಿಕ್ಷಣವನ್ನೇ ಗಾಂಧೀಜಿಯವರು ಪುಷ್ಠೀಕರಿಸಿರುವುದು ನಮಗೆ ತಿಳಿದಿರುವ ವಿಷಯವೆ. ಅದನ್ನು ಆಗಲೂ 'ನವೀನ ಶಿಕ್ಷಣ ಪದ್ಧತಿ' ಎಂದೆ ಕರೆಯಲಾಯಿತು. ಆದರೆ ಈಗ ನಡೆಯುತ್ತಿರುವ ಬಂಡವಾಳಶಾಹಿ ಮತ್ತು ಖಾಸಗೀಕರಣದ ಅತಿರೇಕದಿಂದ ಶಿಕ್ಷಣ ಮಾರುಕಟ್ಟೆಯ ಒಂದು ಸರಕಾಗುತ್ತಿದೆ ಎಂಬ ಅಳುಕಿದೆ. ಏಕೆಂದರೆ ಇಷ್ಟು ಕಾರ್ಯಕ್ಕೆ ಇಷ್ಟು ಸವಲತ್ತುಗಳು (Package) ಎಂಬ ಜಾಹೀರಾತುಗಳನ್ನು ನೋಡಿದರೆ ಶಿಕ್ಷಣ ವ್ಯವಸ್ಥೆಯ ಬಗ್ಗೆ ಕಳವಳವಾಗುತ್ತದೆ. ಈ ಮಾರುಕಟ್ಟೆಯ ಸರಕನ್ನು ಜನರು ತಮ್ಮ ಶಕ್ತ್ಯಾನುಸಾರ ಕೊಳ್ಳುವಂತಾಗಿದೆ. ಈ ರೀತಿಯ ಶಿಕ್ಷಣ ವ್ಯವಸ್ಥೆಯಲ್ಲಿ ವೃತ್ತಿಪರತೆಯನ್ನಾಗಲಿ, ಕೌಶಲ್ಯಾಭಿವೃದ್ಧಿಯನ್ನಾಗಲಿ ನಿರೀಕ್ಷಿಸಲು ಸಾಧ್ಯವಿಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿನ ಈ ಧೋರಣೆ ಬದಲಾಗದ ವಿನಃ ಶಿಕ್ಷಣದಲ್ಲಿ ಪರಿಪೂರ್ಣತೆಯನ್ನು ತರಲು ಕಷ್ಟವಾಗಬಹುದು.

ಶಿಕ್ಷಣವು ಒಂದು ಜವಾಬ್ದಾರಿಯುತ ಕೊಡುಗೆ, ಕ್ರಿಯೆಯಾದಾಗಲೇ ಅದು ಪರಿಶುದ್ಧ ಮತ್ತು ಪರಿಪೂರ್ಣವಾಗುತ್ತದೆ. ಅಂತಹ ಶಿಕ್ಷಣ ವ್ಯವಸ್ಥೆಯಲ್ಲಿ ವೃತ್ತಿಪರತೆ ಮತ್ತು ಕೌಶಲ್ಯಾಭಿವೃದ್ಧಿಗೆ ಪೂರಕವಾದ ವಾತಾವರಣವನ್ನು ನಿರ್ಮಿಸಬಹುದು. ಈ ಪ್ರಬಂಧದಲ್ಲಿ ನಾನು ಶಿಕ್ಷಣದಲ್ಲಿ ವೃತ್ತಿಪರತೆ ಮತ್ತು ಕೌಶಲ್ಯಾಭಿವೃದ್ಧಿಯ ಕೆಲವು ಸಾಧ್ಯತೆಗಳ ಬಗ್ಗೆ ಮಾತ್ರ ಚರ್ಚಿಸಬಯಸುತ್ತೇನೆ. ಏಕೆಂದರೆ ಹೊಸ ಸಾಧ್ಯತೆಗಳ ಬಗ್ಗೆ ಚಿಂತಿಸದೇ ಇದ್ದರೆ ಈಗಿರುವ ಶಿಕ್ಷಣ ಪದ್ಧತಿಯೂ ನಿಂತ ನೀರಾಗಬಹುದು. ಗಾಂಧೀಜಿಯವರನ್ನು ಉಲ್ಲೇಖ ಮಾಡುತ್ತಾ ಅವರು ತಿಳಿಸಿರುವ ನವೀನ ಶಿಕ್ಷಣ ಪದ್ಧತಿಯ ಆಶಯವೂ ಇದೆ

ಆಗಿತ್ತು. ಈಗ ಜಾರಿಯಾಗುತ್ತಿರುವ ನೂತನ ಶಿಕ್ಷಣ ಪದ್ಧತಿಗೂ ನವೀನ ಶಿಕ್ಷಣ ಪದ್ಧತಿಗೂ ಸಾಕಷ್ಟು ಸಾಮ್ಯತೆ ಇದೆ. ಇವೆರಡರ ಮುಖ್ಯ ಉದ್ದೇಶ ಕೌಶಲ್ಯಾಭಿವೃದ್ಧಿಯೇ ಆಗಿದೆ ಎನ್ನುವುದು ಗಮನಿಸಬೇಕು.

**ಶಿಕ್ಷಣದಲ್ಲಿ ವೃತ್ತಿಪರತೆಯ ಸಾಧ್ಯತೆಗಳು :**

ಶಿಕ್ಷಣದಲ್ಲಿ ವೃತ್ತಿಪರತೆ ಸಾಧ್ಯವಾಗುವುದು ಪಠ್ಯಕ್ರಮದಿಂದಲ್ಲ, ಬದಲಾಗಿ ಅದನ್ನು ಅನುಷ್ಠಾನಗೊಳಿಸುವ ಬದ್ಧತೆಯಿಂದ. ಇಂದಿನ ಆಧುನಿಕ ಶಿಕ್ಷಣ ಪದ್ಧತಿಗಳೇನು ಬಹಳಷ್ಟು ಸುಧಾರಿಸಿಲ್ಲ ಅಥವಾ ಅದು ಅಷ್ಟೇ ಬದ್ಧತೆಯಿಂದ ಅನುಷ್ಠಾನ ಗೊಂಡಿಲ್ಲ. ಅವುಗಳಲ್ಲಿ ಇನ್ನಷ್ಟು ಗೊಂದಲಗಳಿವೆ. ಇದಕ್ಕೆ ಶಿಕ್ಷಣದ ಖಾಸಗೀಕರಣವೂ ಒಂದು ಕಾರಣವಷ್ಟೆ. ಶಿಕ್ಷಣ ಕ್ಷೇತ್ರ ಬಂಡವಾಳಶಾಹಿಗಳನ್ನು ಇಂದು ಬಹಳಷ್ಟು ಆಕರ್ಷಿಸುತ್ತಿರುವುದೇಕೆ? ಎಂಬುವುದನ್ನು ನಾವಿಂದು ಮನಗಾಣಬೇಕು. ಶಿಕ್ಷಣ ಒಂದು ಸೇವೆಯಾಗಿದ್ದಾಗಿನ ಕಾಲದಿಂದ ಇಂದು ಶಿಕ್ಷಣ ಬಹಳಷ್ಟು ಹದಗೆಟ್ಟಿದೆ ಎಂಬುದೆ ನನ್ನ ಅಭಿಪ್ರಾಯ. ಇನ್ನು ಪೋಷಕರಾದಿಯಾಗಿ ಶಿಕ್ಷಕರೂ ಕೂಡ ಶಿಕ್ಷಣದಲ್ಲಿ ಕೇವಲ ಅಂಕಗಳನ್ನು ಮಾತ್ರ ಪ್ರಧಾನವಾಗಿ ಪರಿಗಣಿಸುತ್ತಿರುವುದು ಈ ಆಧುನಿಕ ಕಾಲಘಟ್ಟದಲ್ಲಿ ಬಹಳಷ್ಟು ವಿಪರ್ಯಾಸವಾಗಿ ಕಾಣುತ್ತಿದೆ. ಆದಾಗ್ಯೂ ಅಂಕವೆAಬುದು ಶಿಕ್ಷಣದ ಕಟ್ಟ ಕಡೆಯ ಮಾನದಂಡವಷ್ಟೆ. ಆದರೆ ಅದೇ ಇಂದು ಪ್ರಧಾನವಾಗಿ ಪರಿಗಣಿತಸಲಾಗುತ್ತಿರುವುದು ಶಿಕ್ಷಣ ಕ್ಷೇತ್ರದ ದುರಂತವೇ ಸರಿ.

'ಜೀವನದುದ್ದಕ್ಕೂ ತಾನಾಗಿಯೇ ವಿವಿಧ ಅನುಭವಗಳ ಮೂಲಕ ದೊರೆಯುವುದೇ ಶಿಕ್ಷಣವಾಗಿದೆ ಎಂಬ ಅಭಿಪ್ರಾಯವಿದೆ. ಎಂದರೆ ಶಿಕ್ಷಣವು ಅನುಭವಗಳ ಸಾರದಿಂದ ದೊರಕಬೇಕು. ಅನುಭವದಿಂದಲ್ಲದೆ ದೊರಕುವ ಶಿಕ್ಷಣ ನಿಜವಾದ ಶಿಕ್ಷಣವೆನಿಸಲಾರದು. ಮತ್ತು ಅದು ದೀರ್ಘ ಕಾಲದವರೆಗೆ ಉಪಯೋಗಕ್ಕೆ ಬರದು. ಆದ್ದರಿಂದಲೆ ಅಂತಹ ಕಲಿಕೆಯು ವೃತ್ತಿಪರತೆಯನ್ನು ಸಾಧಿಸಲಾಗದು. ಈಗ ಇರುವ ಪದ್ಧತಿಯಲಂತೂ ಅದು ಅಸಾಧ್ಯವೆಂಬುದೇ ನನ್ನ ನಿಲುವು. ಹಾಗೆ ನೋಡಿದರೆ ಹಿಂದಿನ ಗುರುಕುಲ ಶಿಕ್ಷಣ ಪದ್ಧತಿಯಲ್ಲಿ ವೃತ್ತಿಪರತೆಯ ಸಾಧ್ಯತೆಗಳು ಅಧಿಕವಾಗಿತ್ತು. ಏಕೆಂದರೆ ಗುರುಕುಲ ಪದ್ಧತಿಯಲ್ಲಿ ಶಿಕ್ಷಣವೆಂದರೆ ಅದು ಪೂರ್ಣವಾಗಿ ಅನುಭವದ ಆಧಾರದಲ್ಲಿ ನಡೆಯುತ್ತಿತ್ತು. ಅನುಭವಿಸದೆ ಅಲ್ಲಿ ಯಾವ ಕಲಿಕೆಯೂ ಸಾಧ್ಯವಾಗುತ್ತಿರಲಿಲ್ಲ. ಅದು ವೇದಾಧ್ಯಯನವಿರಲಿ, ಅಥವಾ ವ್ಯಾಕರಣಾಧ್ಯಯನವಿರಲಿ ಅನುಭವಿಸಿಯೇ ಕಲಿಯಬೇಕಿತ್ತು. ಅದ್ದರಿಂದ ಅಲ್ಲಿ ವೃತ್ತಿಪರತೆಯ ಸಾಧ್ಯತೆ ಹೆಚ್ಚು ಸಾಧಿತವಾಗಿತ್ತು ಎಂಬುದನ್ನು ಗಮನಿಸಬಹುದು. ಆದರೆ ಇಂದಿನ ಈ ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ನಾವು ಸೋತಿರುವುದೆಲ್ಲಿ ಎಂಬ ಪ್ರಶ್ನೆ ಬಹುವಾಗಿ ಕಾಡುತ್ತದೆ. ವಿದ್ಯಾರ್ಥಿದೆಸೆಯಿಂದಲೇ ಮಕ್ಕಳಿಗೆ ಸಿಗುತ್ತಿರುವ ಶಿಕ್ಷಣದ ಫಲಶ್ರುತಿ ಏನು? ಎಂದು ವಿವೇಚಿಸಬೇಕಾಗಿದೆ. ಶಾಲಾ-ಕಾಲೇಜುಗಳಲ್ಲದೆ ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ

ಕೋಚಿಂಗ್ ಸೆಂಟರ್‌ಗಳ ಪಾತ್ರವೇನು? ಹೀಗೆ ಅನೇಕ ಪ್ರಶ್ನೆಗಳು ನಮ್ಮನ್ನು ಕಾಡತೊಡಗುತ್ತದೆ. ಇಲ್ಲಿ ನಾನು ಶಿಕ್ಷಣ ನೀತಿಗಳ ಬಗ್ಗೆ ಮಾತನಾಡುತ್ತಿಲ್ಲ. ಅವು ಏನೇ ಹೇಳಲಿ. ಬದಲಾಗಿ ಅದರ ಅನುಷ್ಠಾನದ ಬಗ್ಗೆ ನನ್ನ ಪ್ರಶ್ನೆ ಇದೆ. ವೃತ್ತಿಪರ ಶಿಕ್ಷಣ ವ್ಯವಸ್ಥೆಯೂ ಪರಿಣಾಮಕಾರಿಯಾಗಿ ಸಾಧ್ಯವಾಗಬೇಕಾದರೆ ಅದು ಬಂಡವಾಳಶಾಹಿತ್ವದಿಂದ ಹೊರಬಂದು ಸಾಮಾಜಿಕವಾಗಬೇಕು. ಅಸಂಬದ್ಧ ಸ್ಪರ್ಧೆಯಿಂದ ಹೊರಬಂದು ಮುಕ್ತ ಕಲಿಕೆಯತ್ತ ಸಾಗಬೇಕಾಗುತ್ತದೆ. ಶಿಕ್ಷಣದಲ್ಲಿ ಸ್ಪರ್ಧೆ ಏರ್ಪಟ್ಟಿರುವುದೆ ಒಂದು ದುರಂತ. ಇಲ್ಲಿ ಮಕ್ಕಳಿಂದ ಮಕ್ಕಳಿಗೆ, ಶಾಲೆಗಳಿಂದ ಶಾಲೆಗಳಿಗೆ, ಕಾಲೇಜಿನಿಂದ ಕಾಲೇಜಿಗೆ ಸ್ಪರ್ಧೆಯಿದೆ. ಈ ಸ್ಪರ್ಧೆ ಏತಕ್ಕಾಗಿ ಏಂದರೆ ಕೇವಲ ಬಂಡವಾಳವನ್ನು ಆಕರ್ಷಿಸುವ ಸಲುವಾಗಿ ಎಂಬುವುದು ಸೂಕ್ಷ್ಮ ಮತಿಗಳಿಗೆ ಅರ್ಥವಾಗದ ವಿಷಯವೇನಲ್ಲ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಣ ವ್ಯವಸ್ಥೆ ಸಿಲುಕಿರುವಾಗ ಇಲ್ಲಿ ನಾವು ಯಾವ ರೀತಿಯ ವೃತ್ತಿಪರತೆಯನ್ನು ನಿರೀಕ್ಷಿಸಲು ಸಾಧ್ಯ.

ಹಾಗೆಂದ ಮಾತ್ರಕ್ಕೆ ಖಾಸಗೀಕರಣದ ಶಿಕ್ಷಣದಲ್ಲಿ ವೃತ್ತಿಪರತೆ ಸಾಧ್ಯವೇ ಇಲ್ಲ ಎಂಬುವುದು ನನ್ನ ವಾದವಲ್ಲ. ವೃತ್ತಿಪರತೆಯನ್ನು ಸಾಧಿಸಿದ ಅನೇಕ ಖಾಸಗಿ ಸಂಸ್ಥೆಗಳು ನಮ್ಮ ಮುಂದಿವೆ. ಆದರೆ ಅವುಗಳ ಸಂಖ್ಯೆ ಎಷ್ಟಿವೆ ಮತ್ತು ಅವು ಎಲ್ಲರಿಗೂ ದೊರಕುತ್ತಿದೆಯೇ ಎಂಬುವುದು ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವಾಗಿದೆ. ಶಿಕ್ಷಣವು ಸಾರ್ವತ್ರೀಕರಣವಾದ ಹಾಗೆಯೇ ಶಿಕ್ಷಣದಲ್ಲಿ ವೃತ್ತಿಪರತೆಯು ಸಾರ್ವತ್ರೀಕರಣವಾಗಬೇಕು. ಆಗ ಮಾತ್ರ ಸರ್ವರಿಗೂ ವೃತ್ತಿಪರ ಶಿಕ್ಷಣದ ಸವಲತ್ತುಗಳು ದೊರಕುವುದು ಸಾಧ್ಯವಾಗುತ್ತದೆ.

**ವೃತಿಪರ ಶಿಕ್ಷಣದಲ್ಲಿ ಭಾಷಾಮಾಧ್ಯಮದ ಪಾತ್ರ :**

ಶಿಕ್ಷಣದಲ್ಲಿ ಭಾಷಾಮಾಧ್ಯಮವೆಂಬುದು ಕೇವಲ ಅನ್ನದ ಹುಡುಕಾಟ ಅಥವಾ ಪ್ರತಿಷ್ಠೆಯ ಸಂಕೇತವಷ್ಟೆ. ಮದ್ಯಮ ಬಡ ವರ್ಗದವರಿಗೆ ಇಂಗ್ಲೀಷ್ ಮಾಧ್ಯಮ ಅನ್ನದ ಹುಡುಕಾಟವಾದರೆ, ಶ್ರೀಮಂತರಿಗೆ ಪ್ರತಿಷ್ಠೆಯ ಸಂಕೇತವಷ್ಟೆ. 'ಶಿಕ್ಷಣ ಎಂಬ ಪದಕ್ಕೆ ವ್ಯಾಪಕವಾದ ಅರ್ಥವಿದೆ. ಈ ಅರ್ಥವನ್ನು ಹಿಡಿದಿಡುವ ಒಂದು ಸಮರ್ಥ ವ್ಯಾಖ್ಯೆಯನ್ನು ಅಥವಾ ನಿರ್ದಿಷ್ಟವಾಗಿ ಇದೇ ಶಿಕ್ಷಣ ಎಂಬ ವ್ಯಾಖ್ಯೆಯನ್ನು ಕೊಡುವುದು ಕಷ್ಟ. ತತ್ವಜ್ಞಾನಿಗಳು, ಶಿಕ್ಷಣ ಚಿಂತಕರು, ರಾಜಕಾರಣಿಗಳು ಮತ್ತು ಸಾಧು ಸಂತರು ಮುಂತಾದವರೆಲ್ಲರೂ ತಮ್ಮ ತಮ್ಮ ದೃಷ್ಟಿಕೋನಗಳಿಗನುಸಾರವಾಗಿ ಶಿಕ್ಷಣವನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ. ಅದ್ದರಿಂದ ಯಾವುದೇ ಮಾತೃಭಾಷೆಯಲ್ಲೂ ವ್ಯವಸ್ಥಿತ ಸಂರಚನೆಯಿAದ ಪರಿಣಾಮಕಾರಿ ವೃತ್ತಿಪರ ಶಿಕ್ಷಣವನ್ನು ನೀಡಲು ಸಾಧ್ಯವಿದೆ ಎಂಬುವುದು ನನ್ನ ಅಭಿಮತ. ಇದಕ್ಕೆ ಆಡಳಿತ ರೂಢ ಸರಕಾರಗಳ ಇಚ್ಛಾಶಕ್ತಿ ಬಹು ಮುಖ್ಯವಾಗುತ್ತದೆ. ಇಂಗ್ಲೀಷ್ ಮಾಧ್ಯಮದಲ್ಲಿ ಓದುವ ಮಕ್ಕಳಿಗೆ ಇಂಗ್ಲೀಷ್

ಭಾಷೆಯ ಮೇಲೆ ಪ್ರೀತಿ ಇಲ್ಲ. ಇತ್ತ ಮಾತೃಭಾಷೆಯಲ್ಲಿ ಕಲಿಕೆಗೆ ಅವಕಾಶವಿಲ್ಲ. ಇಂತಹ ದ್ವಂದ್ವ ಮನಸ್ಥಿತಿಯಿಂದ ಮಕ್ಕಳಲ್ಲಿ ಸಾಹಿತ್ಯಾಸಕ್ತಿಯಾಗಲಿ ಭಾಷಾಪ್ರೇಮವಾಗಲಿ ನಿರೀಕ್ಷಿಸಲು ಹೇಗೆ ಸಾಧ್ಯ. ಇದು ಭಾಷ ವೃತ್ತಿಪರತೆ ಬಹು ದೊಡ್ಡ ತೊಡಕಾಗಿದೆ. ಇಂತಹ ತ್ರಿಶಂಕು ಸ್ಥಿತಿಯಲ್ಲಿ ಯಾವ ವೃತ್ತಿಪರತೆಯನ್ನು ಸಾಧಿಸಿದಂತಾಯಿತು.

ಭಾರತೀಯ ಮಾತ್ರಭಾಷಾ ಪರಂಪರೆಗೆ ವಿಶಿಷ್ಟವಾದ ಶಕ್ತಿಯೊಂದಿದೆ. ಅದನ್ನು ಸಫಲವಾಗಿ ಶಿಕ್ಷಣದಲ್ಲಿ ದುಡಿಸಿಕೊಂಡರೆ ಭಾಷಾ ಕ್ಷೇತ್ರದಲ್ಲಿ ವೃತ್ತಿಪರತೆಯನ್ನು ಸಾಧಿಸುವುದು ಕಷ್ಟವಾಗಲಾರದು. ಇದಕ್ಕೆ ಉದಾಹರಣೆಯಾಗಿ ೧೯೫೦ರ ದಶಕದಿಂದ ೧೯೮೦ ದಶಕದ ವರೆಗೆ ಓದಿದ ಎಲ್ಲ ಸಾಹಿತಿಗಳು, ವಿಜ್ಞಾನಿಗಳು, ವಿದ್ವಾಂಸರು ದಾರ್ಶನಿಕರು ಸಾಕ್ಷಿಯಾಗಿದ್ದಾರೆ. ಇಲ್ಲಿ ಅವರು ಅಂಕಗಳನ್ನು ಹೊರತಾಗಿ ಸಾಧಿಸಿರುವುದೇ ನಿಜವಾದ ಅರ್ಥದಲ್ಲಿ ವೃತ್ತಿಪರತೆಯಾಗಿದೆ. ಆದರೆ ಇಂದು ಅಂತಹ ಪ್ರೇರಣೆ ಶಿಕ್ಷಣದಲ್ಲಿ ದೊರಕುತಿದೆಯೇ ಎಂದು ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳಬೇಕು.

ಶಿಕ್ಷಣದಲ್ಲಿ ವೃತ್ತಿಪರತೆಯು ಕೇವಲ ಶಿಕ್ಷಣ ನೀತಿಗಳಿಗಷ್ಟೆ ಮೀಸಲಾಗಿದೆಯೆ ಹೊರತು ಎಂದಿಗೂ ಅದು ಶಿಕ್ಷಣ ವ್ಯವಸ್ಥೆಯನ್ನು ತಲುಪಿದ್ದೇ ಇಲ್ಲ. ಇಂದು ಅನೇಕ ಶಿಕ್ಷಣ ನೀತಿಗಳು ಜಾರಿಯಲ್ಲಿದ್ದರೂ(ನವೀನ ಶಿಕ್ಷಣ ಪದ್ಧತಿ) ಅದು ಸರಿಯಾದ ಅರ್ಥದಲ್ಲಿ ಅನುಷ್ಠಾನವಾಗುತ್ತಿಲ್ಲ. ವೃತಿಪರ ಮನೋಭಾವ ಪೋಷಕರಲ್ಲೂ, ಶಿಕ್ಷಕ ವರ್ಗದಲ್ಲೂ ಬೆಳೆಯದ ವಿನಃ ಅದು ಶಿಕ್ಷಣ ಕ್ಷೇತ್ರವನ್ನು ತಲುಪುವುದು ಸಾಧ್ಯವೇ ಇಲ್ಲ. ಪ್ರಾಯಶಃ ಇಂದಿನ ಶಿಕ್ಷಣವು ಇಂತಹ ಮನೋಬಲವನ್ನೂ, ಆತ್ಮಶಕ್ತಿಯನ್ನು ಬಲವರ್ಧನೆಗೊಳಿಸಲು ಸಾಧ್ಯವಾದರೆ ಮುಂದಿನ ದಿನಗಳಲ್ಲಿ ನಮ್ಮ ಯುವ ಪೀಳಿಗೆಗೆ ವೃತ್ತಿಪರ ಶಿಕ್ಷಣವನ್ನು ವ್ಯವಸ್ಥಿತವಾಗಿ ಜಾರಿಗೊಳಿಸಬಹುದೆಂಬುದು ನನ್ನ ಕನಸು ಮತ್ತು ನಂಬಿಕೆ. ಅದಕ್ಕಾಗಿಯಾದರೂ ನಾವೆಲ್ಲರೂ ಸೇರಿ ಶ್ರಮಿಸೋಣ.

## ಕೊನೆ ಟಿಪ್ಪಣಿಗಳು:

೧. ಶಿಕ್ಷಣದ ತಾತ್ವಿಕ ಹಾಗೂ ಸಾಮಾಜಿಕ ತಳಹದಿಗಳು – ಡಾ. ಎಸ್. ಬಿ. ಯಾದವಾಡ

೨. ಶಿಕ್ಷಣದ ತಾತ್ವಿಕ ನೆಲೆ- ಡಾ. ವೈ. ಎನ್. ಶ್ರೀಧರ್

೩. ಬೋಧನಾ ವಿಧಾನದ ಅರಿವು - ಶಿವಕುಮಾರ್ ಎಸ್. ಕೆ

**ಪರಾಮರ್ಶನ ಗ್ರಂಥಗಳು :**

೧. ಬೋಧನಾ ವಿಧಾನಗಳ ಅರಿವು – ಶಿವಕುಮಾರ್ ಎಸ್. ಕೆ

೨. ಲಿಂಗತ್ವ, ಶಾಲೆ ಮತ್ತು ಸಮಾಜ – ಡಾ. ಚಂದ್ರಹಾಸ ಜಿ. ಕಣ್ವತೀರ್ಥ

೩. ಕನ್ನಡ ಭಾಷಾ ಬೋಧನಾ ಶಾಸ್ತ್ರ – ಡಾ. ರಾಜೇಶ್ ಇ. ಬೆಳ್ಳೇರ್

೪. ಶಿಕ್ಷಣದ ತಾತ್ವಿಕ ಹಾಗೂ ಸಾಮಾಜಿಕ ತಳಹದಿಗಳು – ಡಾ. ಎಸ್. ಬಿ. ಯಾದವಾಡ